ನೂರಿನ್ನೂರು ಮನೆಗಳಿರುವ ನಮ್ಮೂರಲ್ಲಿ ಲಗ್ನಾಗಿ ಎರಡು ವರ್ಷ ತುಂಬೋದರೊಳಗ ಮಕ್ಕಳಾದ್ರೂ ಆಗಬೇಕು, ಇಲ್ಲಾ ಗರ್ಭನಾದ್ರೂ ಕಟ್ಟಬೇಕು. ಒಂದು ವೇಳೆ ಎರಡು ನಡೀಲಿಲ್ಲ ಅಂದ್ರ ಅಂತ ಗಂಡಸರಿಗೆ 'ಹಡಕಾ' ಅಂತ ಹೆಸರಿಟ್ಟು ಹಡಕರ ಪಟ್ಟಿಯಲ್ಲಿ ಸೇರಿಸುತ್ತಾರೆ. ಆ ಗಂಡಸರಿಗೆ ಮತ್ತು ಆ ಗಂಡಸರ ಕುಟುಂಬಕ್ಕೆ ಎಲ್ಲರಿಗೆ ಸಿಗುವಂತೆ ಸಾಮಾನ್ಯ ಮರ್ಯಾದೆ ಸಿಗದೇ ಹೋಗುತ್ತದೆ. ಅಕ್ಕಪಕ್ಕದೂರೋರು ಕೂಡ ನಮ್ಮೂರಲ್ಲಿ ಎರಡು ವರ್ಷ ಮೀರಿದರೂ ಮಕ್ಕಳು ಆಗಲಾರದೋರನ ಎಣಿಸಿ, ತಮ್ಮೂರಲ್ಲಿ ಇದೇ ರೀತಿ ಉಳಕಂಡವರ ಜೊತೆ ತಾಳೆ ಮಾಡಿ ನೋಡಿದಾಗ, ಒಂದು ವೇಳೆ ನಮ್ಮ ಊರಿನ ಸಂಖ್ಯೆ ಜಾಸ್ತಿ ಬಂದವು ಅಂದರೆ ಅದಕ್ಕವರು ಹೆಮ್ಮೆಯಿಂದ ಬೀಗಿ ಊರನ್ನು ಕಟ್ಟಿದ ಹಿರೇಮಣಿಗಳಿಗೆ ಅಪಮಾನಿಸುತ್ತಾರೆ. ಒಟ್ಟಿನಲ್ಲಿ ನಮ್ಮೂರಿನ ಮರ್ಯಾದೆ, ಏಳಿಗೆ, ಅಭಿವೃದ್ಧಿ ತಕ್ಷಣಾನೇ ಮಕ್ಕಳ ಮಾಡುವುದರ ಮೇಲೆ ನಿಂತುಕೊಂಡಿದೆ. ಲಗ್ನಾದ ತಕ್ಷಣಾನೇ ಊರಿನ ಹನುಮಂದೇವರ ಪೂಜಾರಿ ಲಗ್ನಪತ್ರಗಳನ್ನ ಪೂಜಾ ಸಾಮಾನುಗಳಿನ್ನಿಡುವ ಕೋಣೆಯಲ್ಲಿ ಕ್ರಮವಾಗಿ ಜೋಡಿಸುತ್ತಾನೆ. ಪೂಜಾರಿ ಎರಡು ವರ್ಷ ಮೀರಿದ ಲಗ್ನಪತ್ರಗಳಲ್ಲಿ ಮಕ್ಕಳಾದವರ ಲಗ್ನಪತ್ರಕ್ಕೆ ಪಂಚರ ಸಹಿ ಮಾಡಿಸಿ ಗಂಗೆಗೆ ಬಿಡುತ್ತಾನೆ. ಎರಡು ವರ್ಷ ಮೀರಿದ ಮಕ್ಕಳಾಗದೇ ಉಳಿದವರ ಲಗ್ನಪತ್ರಗಳನ್ನು, ಊರಿನ ಪಂಚರಿಗೆ ಪ್ರತಿ ಉಗಾದಿ

